ಅವಲಕ್ಕಿ ಡಬ್ಬಿಯನ್ನು ಮುಂದಕ್ಕೆಳೆದ ಕೈ ಅದನ್ನು ಹಾಗೆಯೇ ಹಿಂದೆ ದೂಕಿತು. ಕೈಚೀಲದ ಜೊತೆ ಹೊರಗಿನ ಮೇಜಿನ ಮೇಲಿಟ್ಟು ಬಂದಿದ್ದ ಕವರನ್ನು ಒಳಗೆ ತಂದ ರಾಮಚಂದ್ರ. ಅವತ್ತಿನ ವಿಶೇಷದ ಭಕ್ಷ್ಯಗಳನ್ನು ನಿರೀಕ್ಷಿಸಿದವನಿಗೆ ಅವುಗಳ ಜೊತೆ ಜೊತೆಯಲ್ಲಿ ಕಾಸಿದ ಬಾಳೆಲೆ ಸಿಗುಳಿನಲ್ಲಿ ಕಟ್ಟಿ, ಬಾಳೆನಾರಿನಲ್ಲಿ ಭದ್ರಪಡಿಸಿದ ನಾಲ್ಕಾರು ಸಣ್ಣ ಸಣ್ಣ ಪೊಟ್ಟಣಗಳನ್ನು ಕಂಡು ಅಚ್ಚರಿ. ಒಂದೊಂದಾಗಿ ಬಿಡಿಸಿ ನೋಡಿದರೆ ಮಧ್ಯಾಹ್ನದ ಊಟಕ್ಕೆ ತಯಾರಿಸಿದ್ದ ಎರಡು ಬಗೆಯ ಪಲ್ಯಗಳು, ಚಟ್ನಿಗಳು, ಉಪ್ಪಿನಕಾಯಿ ಮುಂತಾದ ವ್ಯಂಜನಗಳು. ಒಬ್ಬಂಟಿ ಮನುಷ್ಯನ ರಾತ್ರಿಯ ಊಟಕ್ಕೆ ಅನುಕೂಲವಾಗಲೆಂದು ಮುತುವರ್ಜಿಯಿಂದ ಕಟ್ಟಿ ಕೊಟ್ಟ ಮೇಲೋಗರಗಳು. ಪದ್ಮನಾಭ ಹೇಳಿದಂತೆ ಇದನ್ನು ಕಟ್ಟಿಕೊಟ್ಟವಳು ನಾಗಮ್ಮನೇ ಆಗಿದ್ದರೆ ಅವಳಿಗೆ ತನ್ನ ಮೇಲೆ ಇನ್ನೂ ಕಾಳಜಿ ಉಳಿದುಕೊಂಡಿದೆಯೆಂದು ಅರ್ಥವಲ್ಲವೇ? ಮೈ ಜುಮುಗುಟ್ಟಿದಂತಾಯ್ತು. ಆದರೆ ಆ ಯೋಚನೆ ಬಹು ಹೊತ್ತು ಬಾಳಲಿಲ್ಲ. ಅಮ್ಮನ ಹೆಸರಲ್ಲಿ ಹುಡುಗನೇ ಎಲ್ಲವನ್ನೂ ಕಟ್ಟಿ ತಂದಿರಬಹುದು. ಅಪ್ಪನ ರಾತ್ರಿಯ ಊಟಕ್ಕೆ ಅನಾನುಕೂಲ ಆಗಬಾರದೆಂಬ ಉದ್ದೇಶ ಇರಬಹುದು. ರಾಮಚಂದ್ರ ಅನ್ನಕ್ಕಿಡಲು ಕುಕ್ಕರನ್ನು ಒಲೆಯ ಮೇಲೇರಿಸಿದ. ಅಡಿಗೆಭಟ್ಟರು ಹಿಂದಿನ ರಾತ್ರಿ ತರಕಾರಿ ಹೆಚ್ಚಿಟ್ಟು, ಬೆಳಗಾ ಮುಂಚೆ ಬೇಯಿಸಿ, ಎಷ್ಟು ಹೊತ್ತಿಗೆ ತಯಾರಿಸಿಟ್ಟಿದ್ದ ಪಾಕವೋ, ಜೊತೆಗೆ ಬಾಳೆಲೆಯಲ್ಲಿ ಕಟ್ಟಿಟ್ಟ ಶಾಖವೂ ಸೇರಿಕೊಂಡು ಇನ್ನೇನು ಸಣ್ಣಗೆ ಹಳಸಲು ವಾಸನೆ ಬರುವಂತಾಗಿತ್ತು ಮೇಲೋಗರಗಳಿಗೆ. ಆದರೆ ತೀರಾ ತಿನ್ನದಷ್ಟೇನಲ್ಲ.

ಬಿಸಿ ಅನ್ನಕ್ಕೆ ಪಲ್ಯಗಳನ್ನು ಒಂದೊಂದಾಗಿ ಕಲೆಸಿಕೊಂಡು ರುಚಿಯಾಗಿ ಊಟ ಮಾಡಿದ ರಾಮಚಂದ್ರ. ತಾಜಾ ಮೊಸರಿನ ಜೊತೆ ಅರಮರಲು ಕಾಯಿ ಬೆರೆಸಿದ ಲಿಂಬೇಹೋಳಿನ ಉಪ್ಪಿನಕಾಯಿ ಖಾರಖಾರವಾಗಿ, ಹುಳಿಹುಳಿಯಾಗಿ ನಾಲಿಗೆಗೆ ಸೊಗಸಿತು. ಪೇಟೆಯಿಂದ ಬರುವ ಬೀಗರಿಗೆ ಹಳ್ಳಿ ಸೊಗಡಿನ ರುಚಿ ತೋರಿಸಲು ಅರಮರಲುಕಾಯಿ ಬೆರೆಸಿದ ಉಪ್ಪಿನಕಾಯಿ ಬಡಿಸಿದ್ದಾ? ಇರಬಹುದು.

ಉಂಡ ಎಲೆ ಮುದುರಿ ಹಿತ್ತಲಿನ ಗೊಬ್ಬರದ ಗುಂಡಿಗೆ ಬಿಸಾಕಿ ಬಂದ ರಾಮಚಂದ್ರ ಉಂಡ ಜಾಗವನ್ನು ಅಂಗೈಯಿಂದ ಗುಂಡಗೆ ಸಾರಿಸಿ ಎಂಜಲು ಗೋಮಯ ಶುದ್ಧೀಕರಣ ಕ್ರಿಯೆ ಮುಗಿಸಿದ. ಅಮ್ಮನ ಯಜಮಾನಿಕೆ ಇದ್ದಾಗ ಇಂತಾ ಕೆಲಸಗಳನ್ನು ಗಂಡು ಮಕ್ಕಳು ಮಾಡುವುದೆಂದರೆ ಅವಳಿಗೆ ಕಲ್ಪನಾತೀತ. ಗಂಡು ಮಕ್ಕಳು ಹಿಡಿಕುಂಟೆ ಮುಟ್ಟಲೇಬಾರದು ಎನ್ನುವುದು ಅವಳು ರೂಢಿಸಿಕೊಂಡು ಬಂದಿದ್ದ ನಂಬಿಕೆ. ಎಲ್ಲೋ ಕಣ್ಣಿಗೆ ಕಾಣದಲ್ಲಿ ಕೂತು ಮಗ ಮಾಡುವ ಇಂತಾ ಕೆಲಸಗಳನ್ನು ಅವಳು ನೋಡುತ್ತಿದ್ದುದೇ ಆಗಿದ್ದರೆ ಅವಳ ಆತ್ಮ ವಿಲವಿಲ ಒದ್ದಾಡುತ್ತಿರುತ್ತದೆ..

ತನ್ನ ಕೋಣೆಗೆ ಬಂದ ರಾಮಚಂದ್ರ ಬೆಳಿಗ್ಗೆ ಎದ್ದು ಹಾಗ್ಹಾಗೆಯೇ ಬಿಟ್ಟು ಹೋಗಿದ್ದ ಹಾಸಿಗೆಯನ್ನು ಕೊಡವಿಕೊಳ್ಳುವ ಗೋಜಿಗೂ ಹೋಗದೆ ಹಾಸಿಗೆಯ ಮೇಲೆ ಬಿದ್ದುಕೊಂಡು ಮೈಮೇಲೆ ಶಾಲು ಎಳೆದುಕೊಂಡ. ಮೈ ದಣಿದಿದ್ದರೂ ತೂಕಡಿಕೆ ಬರುತ್ತಿಲ್ಲ. ಹೆಚ್ಚು ದಣಿವಾಗಿದ್ರೂ ತಕ್ಷಣಕ್ಕೆ ನಿದ್ದೆ ಬರಲ್ಲ.. ಅಮ್ಮ ಯಾವತ್ತೋ ಹೇಳಿದ್ದ ಮಾತು ನೆನಪಿಗೆ ಬಂತು. ತೀರಾ ದಣಿಯಲು ಕಡಿದು ಕಟ್ಟೆ ಹಾಕುವ ಕೆಲವನ್ನೇನೂ ಮಾಡಿಲ್ಲ. ಆದರೆ ಏನೋ ಆಯಾಸದ ಭಾವನೆ. ಮೈಗೆ ಮಾತ್ರವಲ್ಲ, ಮನಸ್ಸಿಗೂ..

ಮಗಳ ಏಳಿಗೆ ಬಯಸಿ, ಸ್ವಾಭಿಮಾನ ಕಟ್ಟಿಟ್ಟು, ತಾನು ಮಾವನ ಮನೆಯ ಮೆಟ್ಟಿಲು ಹತ್ತಿದ್ದು ಸರಿಯಾಯ್ತಾ? ತಪ್ಪಾಯ್ತಾ? ಮಕ್ಕಳ ಮುಖ ನೆನೆದರೆ ನೂರಕ್ಕೆ ನೂರು ಸರಿ. ಆದರೆ ನಾಗಮ್ಮನ ನಡವಳಿಕೆ ಮನಸ್ಸನ್ನು ನೋಯಿಸುತ್ತಿದೆ. ಒಂದೇ ಒಂದು ಬಾರಿ ಕತ್ತೆತ್ತಿ ನಿರುಕಿಸಲಿಲ್ಲ. ಔಪಚಾರಿಕವಾಗಿ ಆದರೂ ಒಂದು ಮಾತಾಡಲಿಲ್ಲ. ಹುಳಿ ಮಾವಿನಕಾಯಿಯಂತಾ ಸ್ವಭಾವ ಕಾಲನ ಕೈಗೆ ಸಿಕ್ಕಿ ಮಾಗಲೇ ಇಲ್ಲವೇ? ತನ್ನ ಬಗ್ಗೆ ಅವಳಿಗೆ ಆ ಮಟ್ಟದ ತಿರಸ್ಕಾರವೇ? ಅಂತಾ ತಪ್ಪು ತನ್ನಿಂದೇನಾಗಿದೆ?

ಮಗ್ಗುಲು ಹೊರಳಿ ಕಿವಿ ಮುಚ್ಚುವಂತೆ ಶಾಲು ಹೊದ್ದುಕೊಂಡ ರಾಮಚಂದ್ರ. ಇದೇ ಪಲ್ಲಂಗ ಒಂದು ಕಾಲದಲ್ಲಿ ಸುಖದ ಸುಪ್ಪತ್ತಿಗೆಯಾಗಿತ್ತು. ನಾಗಶ್ರೀ ಎನ್ನುವ ಕನ್ಯಾಮಣಿಯೊಂದಿಗೆ ಮದುವೆ ನಿಶ್ಚಯವಾದಾಗ ಸಗ್ಗ ಕೈಗೆಟುಕಿದಂತೆ ಉಬ್ಬಿ ಹೋಗಿದ್ದ ಅಮಾಯಕ ಯುವಕ. ಮನೆಗೆ ಒಬ್ಬಳೇ ಮಗಳಾಗಿ ಮುದ್ದಾಗಿ ಬೆಳೆದ ಹುಡುಗಿ. ನೋಟಕ್ಕೆ ಲಕ್ಷಣವಂತೆ. ಆ ಮನೆಯ ಆಸ್ತಿ ಏನಿದ್ದರೂ, ಎಷ್ಟಿದ್ದರೂ ನಾಳೆ ಅವನೇ ಅದಕ್ಕೆಲ್ಲಾ ವಾರಸುದಾರ. ನಾಗಶ್ರೀಯ ಕೈ ಹಿಡಿದ ಹಕ್ಕಿನಿಂದ ದೊರಕುವ ಸೌಭಾಗ್ಯ. 'ನಿನ್ನ ಅದೃಷ್ಟಾನೇ ಅದೃಷ್ಟ. ಲಕ್ ಹೊಡೆಯೋದೂಂದ್ರೆ ಇದು..' ಗೆಳೆಯರು ಕೊಂಚ ಕರುಬಿನಿಂದ, ಒಂದಲ್ಪ ಮನಸಾರೆ ಹೊಗಳಿ ಅಟ್ಟಕ್ಕೇರಿಸಿದ್ದರು. ಹಾಗೇ ಅನಿಸಿತ್ತಲ್ಲವೇ ತನಗೂ? ಬೇಕೆಂದೇ ಹಣ, ಆಸ್ತಿಯ ಹಿಂದೆ ಬಿದ್ದು ಅಂತಾ ಸಂಬಂಧ ಹುಡುಕಿಕೊಂಡು ಹೋಗಿದ್ದೇನಲ್ಲ. ಅದಾಗೇ ಅದು ಕಾಲಿಗೆ ತೊಡರಿತ್ತು. ಅಡಿಕೆ ಸಂಭಾವನೆಗೆ ವರ್ಷಕ್ಕೊಮ್ಮೆ ಬರುತ್ತಿದ್ದ ಪರಿಚಿತ ಬ್ರಾಹ್ಮಣರೆದುರು ಅಮ್ಮ ಉರು ಹಾಕುತ್ತಿದ್ದಳು,

'ನಿಮಗೆಲ್ಲಾದ್ರೂ ಒಳ್ಳೇ ಸಂಬಂಧ ಗೊತ್ತಿದ್ರೆ ಹಚ್ಚಿ ಹಾಕಿ ಮಾರಾಯ್ರಾ. ಹತ್ತು ಊರು ತಿರುಗೋರು. ಇಂತಿಂತೋರು ಹಿಂಗ್ಹಿಂಗೆ ಅಂತ ಗೊತ್ತಿರುತ್ತೆ ನಿಮ್ಗೆ. ಹುಡುಗಿ ನಮ್ಮನೆಗೆ ಹೊಂದ್ಕಂತಾಳೆ ಅಂತಾದ್ರೆ ಸಾಕು. ಲಕ್ಷಣವಾಗಿ ಮದುವೆ ಮಾಡ್ಕೊಟ್ರೆ ಸಾಕು. ಜಾತಕ ಹೊಂದಾಣಿಕೆಯಾಯ್ತೂಂದ್ರೆ ಸಾಕು..' ಸಾಕು, ಸಾಕು ಅನ್ನುವ ಸೋಬಾನೆ ಹಾಡುತ್ತಲೇ ಅಮ್ಮನ ಪಟ್ಟಿ ಉದ್ದುದ್ದ ಆಗುತ್ತಿರುವುದನ್ನು ಕೇಳಿಸಿಕೊಂಡು ನಗು ಬರುತ್ತಿತ್ತು ರಾಮಚಂದ್ರನಿಗೆ. ಅಮ್ಮನ ಒಳಮನಸ್ಸಿನಲ್ಲಿ ಏನಿದೆ ಎನ್ನುವ ಗುಟ್ಟು ಅವನಿಗೆ ಗೊತ್ತಿಲ್ಲದ್ದೇನಲ್ಲ. ಬಾಯಲ್ಲಿ ಏನೇ ಅಂದರೂ ಅವಳು ಇದ್ದುಳ್ಳವರ ಮನೆಯ ಹುಡುಗಿಗೆ ಗಾಳ ಹಾಕಿಕೊಂಡು ಕೂತಿದ್ದಾಳೆ. ಅವಳ ಮಟ್ಟಿಗೆ ಇದಕ್ಕೆ ಕಾರಣವೂ ಉಂಟು. ರಾಮಚಂದ್ರನ ಅತ್ತಿಗೆ, ಅಂದರೆ ಅವನ ಅಣ್ಣ ರಘುರಾಮನ ಹೆಂಡತಿ ಬಡವರ ಮನೆಯಿಂದ ಬಂದ ಹೆಣ್ಣುಮಗಳು. ಗುಣ, ನಡತೆ, ರೂಪ ಯಾವುದರಲ್ಲೂ ಬೆರಳು ತೋರಿಸುವ ಹಾಗಿಲ್ಲ. ಸದಾ ನೋಡುತ್ತಿದ್ದ ಊರು ಮನೆಯ ಹುಡುಗಿಯಾದ ಅವಳನ್ನು ಮೆಚ್ಚಿ ಮರುಳಾಗಿದ್ದ ರಘುರಾಮ.

'ಮದುವೆ ಅಂತಾದ್ರೆ ಅವಳನ್ನೇ..' ಎಂದು ಹಟ ಹಿಡಿದಿದ್ದ. ಅಮ್ಮ ಮೂತಿ ತಿರುಪಿದ್ದಳು. 'ನೆಟ್ಟಗೆ ಒಂದು ಮದುವೆ ಮಾಡ್ಕೊಡೋ ಯೋಗ್ತಿ ಅವರಿಗಿಲ್ಲ. ಹೋಗಿ ಹೋಗಿ ಅಂತೋರ ಮನೆ ಹುಡುಗಿಗೆ ಬಲಿ ಬಿದ್ದಿದೀಯಲ್ಲ, ನಿನ್ನ ಮಕಕ್ಕಿಷ್ಟು..' ಎಂದು ಉಗಿದು ಉಪ್ಪಿನಕಾಯಿ ಹಾಕಿದ್ದಳು. 'ಪ್ರೀತಿ ಅನ್ನೋದು ಕುಲ, ಗೋತ್ರ, ಆಸ್ತಿ, ಅಂತಸ್ತು, ವಿದ್ಯೆ, ರೂಪ ಮುಂತಾದ್ದನ್ನೆಲ್ಲಾ ನೋಡಿ ಹುಟ್ಟುತ್ತೆ ಅಂದ್ಕಂಡಿದೀಯನೇ? ಅದೊಂದು ಅರ್ಥಾನೇ ಆಗ್ದಿರೋ ಮಾಯೆ. ಮನಸ್ಸಿಗೆ ಮಂಕು ಕವಿಸೋ ಮೋಹಿನಿ..' ಚಾಷ್ಟೆ ಮಾತಾಡಿದ್ದ ರಾಮಚಂದ್ರ. ಪ್ರಾಯ ತುಂಬಿ ತುಳುಕಾಡುತ್ತಿದ್ದ ಅವನಿಗೆ ಅಣ್ಣನ ಚರ್ಯೆಯಲ್ಲಿ ತಪ್ಪು ಕಂಡಿರಲಿಲ್ಲ. ನಮ್ಮನೆಗೆ ಬರೋ ಹುಡುಗಿಯ ಯೋಗಕ್ಷೇಮ ನೋಡಿಕೊಳ್ಳುವ ಜವಾಬ್ದಾರಿ ನಮ್ಮದು ಎಂದು ಅವನ ಆಂತರ್ಯ. ಕೂತಲ್ಲಿ, ನಿಂತಲ್ಲಿ ಅಣ್ಣನಿಗೆ ಸಪೋರ್ಟ್‌ನ ಮಾತಾಡುವ ತಮ್ಮನ ಕುರಿತು ಅಮ್ಮ ಸಹಜವಾಗಿ ಅನುಮಾನಪಟ್ಟಿದ್ದಳು.

'ನೀನೂ ಯಾರನ್ನಾರೂ ಹುಡುಕ್ಕಂಡಿದೀಯನೋ?' ಆತಂಕದಿಂದ ಕೇಳಿದ್ದಳು.

'ಹೌದೂಂತ್ಲೇ ಅಂದ್ಕಾ, ಏನಾಗುತ್ತೆ?'

ಅಮ್ಮನ ಮಕ ಬಿಳಿಚಿಕೊಂಡಿತ್ತು. ಸಮಾಧಾನ ಮಾಡಿದ್ದ ರಾಮಚಂದ್ರ.

'ಇಲ್ಲ ಮಾರಾಯ್ತೀ, ತಮಾಷಿಗೆ ಹೇಳ್ದೆ. ನೀನು ಇದಿದೇ ಕೊರಗು ಹಚ್ಗಂಡು ತಲೆ ಕೆಡಿಸ್ಗಂಬೇಡ. ನೀನು ನೋಡಿದ ಹುಡುಗೀಗೆ ಕಣ್ಣು ಮುಚ್ಗಂಡು ತಾಳಿ

## ಮರದ ಮೊರೆ

ನನ್ನ ಹಸಿರೆಲೆಗಳ
ಉಡುಗೆಯನ್ನು
ಕಳಚಿ ನನ್ನನ್ನು
ಬೆತ್ತಲಾಗಿಸಿದ್ದಾನೆ
ಈ ದುರುಳ ಶಿಶಿರ
ವಸಂತನೆ
ನೀ ಬೇಗ ಬಾರೋ
ನನಗೊಂದು
ಹಸಿರು ಸೀರೆ ತಾರೋ!

★ ಗೀತಾ ಶಾಸ್ತ್ರಿ

